_ ಅಸಲು ದಾವಾ ಸಂಖ್ಯೆ: **- 19/2016** **ಪಿ.ಡಬ್ಲ್ಯೂ.:-2**

ದಿನಾಂಕಃ **29-06-2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- 1 ನೇ ಪ್ರತಿವಾದಿ ಪರ ವಕೀಲರಿಂದ :-**

ನಾನು ಬಿ.ಕಾಂ ಪದವೀಧರ. ನಾನು 1981 ರಲ್ಲಿ ಅಂತಿಮ ವರ್ಷದ ಬಿ ಕಾಂ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇನು. ಹಳೆಯ ಗ್ರಾಮ ಸ್ಥಳಾಂತರವಾದ ಬಳಿಕ ಸರ್ಕಾರದವರು ಟಿ ಗೋಪಗೋಂಡನಹಳ್ಳಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ.ದಾವಾ ಸ್ವತ್ತುಗಳು ಸರ್ಕಾರದಿಂದ ಹಂಚಿಕೆಯದಂತಹ ಸ್ವತ್ತುಗಳು. ಸೈಟ್ ನಂ. 12 ಮತ್ತು 13 ರಲ್ಲಿ ಪೂರ್ವ ಪಶ್ಚಿಮ 90 ಅಡಿ ಉತ್ತರ-ದಕ್ಷಿಣ 120 ಅಡಿ ವಿಸ್ತೀರ್ಣದ ಜಾಗವು ನಾಗೇಂದ್ರಪ್ಪ, ಹಾಲಪ್ಪ ಮತ್ತು ರುದ್ರಪ್ಪ ರವರಿಗೆ ಜಂಟಿಯಾಗಿ ಹಂಚಿಕೆಯಾಗಿತು. ಸದರಿ ಹಂಚಿಕೆಯಾದ ಸಂದರ್ಭದಲ್ಲಿ ನಾಗೇಂದ್ರಪ್ಪರವರ ತಂದೆ ಮೃತರಾಗಿದ್ದರು. ನಾಗೇಂದ್ರಪ್ಪ ರವರು ನನ್ನಗಿಂತ 15 ವರ್ಷ ಹಿರಿಯರು. 1981 ನೇ ಇಸವಿಯ ಸಂದರ್ಭದಲ್ಲಿ ನಾಗೇಂದ್ರಪ್ಪರವರು ಪ್ರಾಪ್ತವಯಸ್ಸಿನವರು ಆಗಿದ್ದರು. ಸೈಟ್ ನಂ. 12 ನಾಗೇಂದ್ರಪ್ಪ ಮತ್ತು ರುದ್ರಪ್ಪ ರವರಿಗೆ ಜಂಟಿಯಾಗಿ ಮಂಜೂರಾಗಿತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸೈಟ್ ನಂ. 12 ಮತ್ತು 13 ಒಟ್ಟಿಗೆ ಮಂಜೂರಾಗಿತ್ತು ಎಂದು ಉತ್ತರಿಸಿರುತ್ತಾರೆ. ಟಿ ಗೋಪಗೊಂಡನಹಳ್ಳಿಯಲ್ಲಿ ಸರ್ಕಾರದವರು 45 X120 ಅಡಿ ವಿಸ್ತೀರ್ಣದ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಕೆಲವು ನಿವೇಶನಗಳು 45 X120 ಅಡಿ ಮತ್ತೆ ಕೆಲವು ನಿವೇಶನಗಳು 50 X120 ಅಡಿ ವಿಸ್ತೀರ್ಣವುಳ್ಳದ್ದಾಗಿವೆ ಎಂದು ಉತ್ತರಿಸಿರುತ್ತಾರೆ. ಖಾತಾ ನಂಬರ್ 13 ರ 45 X120 ಅಡಿ ವಿಸ್ತೀರ್ಣದ ನಿವೇಶನವು ಹಾಲಪ್ಪರವರಿಗೆ ಹಂಚಿಕೆಯಾಗಿರುತ್ತದೆ ಎಂದರೆ ಸರಿಯಲ್ಲ. ಹಾಲಪ್ಪ ರವರ ನಿವೇಶನ ಖಾತೆ ನಂಬರ್ 12 ರ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿ .

ನಾನು ಸಣ್ಣವಯಸ್ಸಿನವನಿದಾಗಲೇ ಹಾಲಪ್ಪ ರವರು ಮನೆಯನ್ನು ಕಟ್ಟಿದ್ದರು. ನಾಗೇಂದ್ರಪ್ಪರವರು 22 ½ X 120 ಅಡಿ ವಿಸ್ತೀರ್ಣದಲ್ಲಿ ಮನೆಯಲ್ಲಿ ಎಷ್ಟು ವರ್ಷಗಳ ಹಿಂದೆ ಕಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಅಣ್ಣ ರುದ್ರಪ್ಪರವರು ಕಟ್ಟಿ ಅವರಿಗೆ ನೀಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ರುದ್ರಪ್ಪರವರು ಹಾಲಪ್ಪ ಮತ್ತು ನಾಗೇಂದ್ರಪ್ಪ ರವರಿಗೆ ಮನೆಗಳನ್ನು ಕಟ್ಟಿಕೊಟ್ಟಿರುತ್ತಾರೆ. ಹಾಲಪ್ಪರವರು 45 X120 ಅಡಿ ವಿಸ್ತೀರ್ಣದಲ್ಲಿ ಮನೆಯನು ಕಟ್ಟಿಕೊಂಡು ಪ್ರತ್ಯೇಕವಾಗಿ ಖಾತೆಯನ್ನು ತನ್ನ ಹೆಸರಿಗೆ ಮಾಡಿಕೊಂಡು, ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಲಪ್ಪ ಮತ್ತು ನಾಗೇಂದ್ರಪ್ಪ ರವರ ಮನೆಯ ಮಧ್ಯೆ ಗೋಡೆಯಿದ್ದು, ಪ್ರತ್ಯೇಕ ಬಾಗಿಲು ಗಳು ಇವೆ . ಹಾಲಪ್ಪ ಮತ್ತು ನಾಗೇಂದ್ರಪ್ಪರವರು ಎಷ್ಟು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**